**ಕರ್ನಾಟಕ ಸರ್ಕಾರ**

ಸಂ:ಆಇ 24 ಟಿಎಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ:05.01.2022.

**ಸುತ್ತೋಲೆ**

**ವಿಷಯ**:-ಸರ್ಕಾರದ ಅಧೀನದಲ್ಲಿರುವ ನಿಗಮ / ಮಂಡಳಿ / ನಿಯಮಿತ /ವಿಶ್ವವಿದ್ಯಾಲಯಗಳು ಮತ್ತು ಇನ್ನಿತರೆ ಸ್ವಾಯತ್ತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು HRMS ನಲ್ಲಿ ಅಳವಡಿಸಿ ವೇತನಗಳನ್ನು ಸೆಳೆಯುವ ಬಗ್ಗೆ.

****-****

ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ 24 ಟಿಎಆರ್ 2020, ದಿನಾಂಕ:17.11.2021 ರಲ್ಲಿ ಸರ್ಕಾರದಿಂದ ವೇತನ ಸಹಾಯಾನುದಾನ ಪಡೆಯುವ ಎಲ್ಲಾ ನಿಗಮ/ಮಂಡಳಿ/ ನಿಯಮಿತ/ ವಿಶ್ವವಿದ್ಯಾಲಯಗಳು ಮತ್ತು ಇನ್ನಿತರೆ ಸ್ವಾಯತ್ತ ಸಂಸ್ಥೆಗಳು ಅಕ್ಟೋಬರ್ 2021 ರವರೆಗೆ ವೇತನಗಳನ್ನು ಹಿಂದಿನಂತೆಯೇ ಸೆಳೆಯಲು ಕಾಲಾವಕಾಶ ನೀಡಲಾಗಿತ್ತು.

ವೇತನ ಸಹಾಯಾನುದಾನ ಪಡೆಯುವ ಸಾಕಷ್ಟು ಸಂಸ್ಥೆಗಳು ತನ್ನ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು HRMS ನಲ್ಲಿ ದಾಖಲಿಸಿದ್ದು, ಬಿಲ್ಲು ತಯಾರಿಸುವಾಗ HRMS ತಂತ್ರಾಂಶದಲ್ಲಿ ತಾಂತ್ರಿಕ ತೊಂದರೆಗಳಿಂದ ಬಿಲ್ಲು ತಯಾರಿಸಲು ಸಾಧ್ಯವಾಗದೆ ಇರುವುದನ್ನು ಸರ್ಕಾರವು ಮನಗಂಡಿದೆ.

ಆದ್ದರಿಂದ, ಸರ್ಕಾರದಿಂದ ವೇತನ ಸಹಾಯಾನುದಾನ ಪಡೆಯುತ್ತಿರುವ ಎಲ್ಲಾ ನಿಗಮ/ಮಂಡಳಿ/ ನಿಯಮಿತ/ ವಿಶ್ವವಿದ್ಯಾಲಯಗಳು ಮತ್ತು ಇನ್ನಿತರೆ ಸ್ವಾಯತ್ತ ಸಂಸ್ಥೆಗಳು **ಮಾರ್ಚ್ 2022 ರೊಳಗಾಗಿ** ಕಡ್ಡಾಯವಾಗಿ HRMS ನಲ್ಲಿ ಸಿಬ್ಬಂದಿ ವಿವರಗಳನ್ನು ದಾಖಲಿಸುವಂತೆ ಹಾಗೂ ಸುತ್ತೋಲೆ ಸಂ:ಆಇ 24 ಟಿಎಆರ್ 2020, ದಿ:26.10.2021 ರಂತೆ ಖಜಾನೆಯಿಂದ ಕೂಡಲೇ GIA Code ಪಡೆಯುವಂತೆ ಸೂಚಿಸಲಾಗಿದೆ. **ಮಾರ್ಚ್ 2022 ರವರೆಗೆ ವೇತನಗಳನ್ನು ಹಿಂದಿನಂತೆಯೇ ಸೆಳೆಯಲು ಕಾಲಾವಕಾಶ ನೀಡಲಾಗಿದೆ.**

5/1/2022

**(ಹೆಚ್.ಎ. ಶೋಭ)**
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ).

**ಪ್ರತಿಗಳು**:-

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-2), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.

4. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಎಲ್ಲಾ ವಿಶೇಷ ಕಾರ್ಯದರ್ಶಿಗಳು/ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
6. ಆಯುಕ್ತರು, ಖಜಾನೆ ಆಯುಕ್ತಾಲಯ, 6ನೇ ಮಹಡಿ, ಕೆ.ಪಿ.ಸಿ.ಎಲ್, ಗ್ರೀನ್ ಬಿಲ್ಡಿಂಗ್, ಔಷಧ ನಿಯಂತ್ರಣ ಕಛೇರಿ ಕಟ್ಟಡದ ಆವರಣ, ಅರಮನೆ ರಸ್ತೆ, ಬೆಂಗಳೂರು-1.
7. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
8. ಎಲ್ಲಾ ನಿಗಮ/ಮಂಡಳಿ/ನಿಯಮಿತ/ವಿಶ್ವವಿದ್ಯಾಲಯಗಳು/ಸಂಘ ಸೊಸೈಟಿಗಳು.
9. ರಿಜಿಸ್ಟ್ರಾರ್, ಕರ್ನಾಟಕ ಉಚ್ಛ ನ್ಯಾಯಾಲಯ ಬೆಂಗಳೂರು.
10. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
11. ಉಪ ನಿರ್ದೇಶಕರು, ಟಿಎನ್ಎಂಸಿ ಖನಿಜ ಭವನ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.